

# ಮಕ್ಕಳಾಗಿಲ್ಲವೇ? ಅಕಾಲಿಕ ಋತುಬಂಧವಿರಬಹುದು!

**ಭಾರತದಲ್ಲಿ 40ಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯರಲ್ಲಿ ಅವಧಿಪೂರ್ವ ಮುಟ್ಟು ನಿಲ್ಲುವ ಪ್ರಮಾಣ ಶೇ 8ರಷ್ಟು. ಈ ಅಕಾಲಿಕ ಋತುಬಂಧದ ಸಮಸ್ಯೆಯಿಂದ ನರಳುವ ಯುವತಿಯರ ಅಂಡಾಶಯದಲ್ಲಿ ಅಂಡಾಣುಗಳ ಸಂಖ್ಯೆ ಕಡಿಮೆಯಿದ್ದು, ಬಂಜೆತನದಿಂದ ನರಳುವುದು ಸಾಮಾನ್ಯ. ಇದಕ್ಕೆ ವೈದ್ಯಕೀಯ ಕ್ಷೇತ್ರದಲ್ಲಿ ಪರಿಹಾರಗಳಿವೆಯೇ?**

**■ ಸುಧಾ ಹೆಗಡೆ**

ಆಕೆ 30ರ ಹರೆಯದ ಯುವತಿ. ವಿವಾಹವಾಗಿ ಎರಡು ವರ್ಷಗಳಷ್ಟೆ. ಇನ್ನೂ ಗರ್ಭ ನಿಂತಿಲ್ಲ, ಜೊತೆಗೆ ಋತುಸ್ರಾವ ನಿಯಮಿತವಾಗಿ ಆಗುತ್ತಿಲ್ಲ ಎಂಬ ಸಮಸ್ಯೆಗಳನ್ನು ಹೊತ್ತು ಪ್ರಸೂತಿ ತಜ್ಞರ ಬಳಿ ಬಂದಿದ್ದಳು. ಹಾರ್ಮೋನ್ ವಿಶ್ಲೇಷಣೆ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ವರದಿ ಪರಿಶೀಲಿಸಿದ ವೈದ್ಯರು ಹೇಳಿದ್ದು 'ಇದು ಪ್ರಿಮೆಚುರ್ ಮೆನೊಪಾಸ್ (ಅಕಾಲಿಕ ಅಥವಾ ಅವಧಿಪೂರ್ವ ಋತುಬಂಧ) ಲಕ್ಷಣ'.

ವೈದ್ಯರ ಅಭಿಪ್ರಾಯ ಕೇಳಿದಾಗ ಸಹಜವಾಗಿಯೇ ಆಕೆಗೆ ಆಘಾತವಾಗಿತ್ತು. 30ರ ತಾರುಣ್ಯದಲ್ಲೇ ಋತುಬಂಧವಾಗುವುದೆಂದರೆ.. ಸಹಜವಾಗಿ ಗರ್ಭ ಧರಿಸುವ ಅವಕಾಶಗಳಿಲ್ಲ ಎಂಬ ಕೊರಗಿನ ಜೊತೆ ಋತುಬಂಧದಿಂದ ತಲೆದೋರುವ ಹತ್ತಾರು ಸಮಸ್ಯೆಗಳನ್ನು ಅನುಭವಿಸಬೇಕಲ್ಲ ಎಂಬ ಸಣ್ಣನೆಯ ಭಯ. ಇದು ಆ ಯುವತಿಯೊಬ್ಬಳ ಸಮಸ್ಯೆ ಮಾತ್ರವಲ್ಲ, ಭಾರತದಲ್ಲಿ ಸಾವಿರಾರು ತರುಣಿಯರು ಈ ಅಕಾಲಿಕ ಋತುಬಂಧದ ಸಮಸ್ಯೆಯಿಂದ ತೊಂದರೆಗೀಡಾಗಿದ್ದಾರೆ.

'ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಗರ್ಭ ಧರಿಸಬಹುದಾದ 40ಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯರಲ್ಲಿ ಈ ಅವಧಿಪೂರ್ವ ಮುಟ್ಟು ನಿಲ್ಲುವ ಪ್ರಮಾಣ ಶೇ 8ರಷ್ಟು. 29–34 ವರ್ಷ ವಯಸ್ಸಿನ ಮಹಿಳೆಯರಲ್ಲಿ ಇದು ಶೇ. 4 ಎಂದು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ಸಂಸ್ಥೆ ನಡೆಸಿದ ಅಧ್ಯಯನದಿಂದ ತಿಳಿದು ಬಂದಿದೆ' ಎನ್ನುತ್ತಾರೆ ಬೆಂಗಳೂರಿನ ನೋವಾ ಐವಿಐ ಫರ್ಟಿಲಿಟಿ ಕೇಂದ್ರದ ಕ್ಲಿನಿಕಲ್ ನಿರ್ದೇಶಕಿ ಡಾ.ಅವಿವಾ ರೋಡ್ರಿಗಸ್.

ಭಾರತದಲ್ಲಿ ಮಹಿಳೆಯರಿಗೆ ಋತುಬಂಧವಾಗುವ ಸರಾಸರಿ ವಯಸ್ಸು 48 ವರ್ಷ. 40 ವರ್ಷಕ್ಕಿಂತ ಮೊದಲೇ ಋತುಬಂಧವಾದರೆ ಅದನ್ನು ಅಕಾಲಿಕ ಋತುಬಂಧವೆಂದೇ ಪರಿಗಣಿಸಲಾಗುತ್ತದೆ.

'ನನ್ನ ಬಳಿ ಕೃತಕ ಗರ್ಭಧಾರಣೆ ಅಥವಾ ಪ್ರನಾಳ ಶಿಶು ಚಿಕಿತ್ಸೆಗೆ ಬರುವವರು ಅಂದರೆ ಬಂಜೆತನ ಸಮಸ್ಯೆಯಿರುವವರಲ್ಲಿ ಶೇ 12–15ರಷ್ಟು ಯುವತಿಯರಲ್ಲಿ ಕಡಿಮೆ ಅಂಡಾಣುಗಳ ಸಮಸ್ಯೆ ಇದೆ. ಶೇ 20ರಷ್ಟು ಪ್ರಕರಣಗಳಲ್ಲಿ ಮಹಿಳೆಯರು